ಲಿವರ್ ತಜ್ಞ ಡಾಕ್ಟರ್ ಸಂಕೇಶ್ವರ ಯಕೃತ್ತು ಸಂಬಂಧಿ ರೋಗಿಗಳ ಎಂಡೋಸ್ಕೋಪಿಗಾಗಿ ಲ್ಯಾಬ್ ಸೇರಿದ್ದರು. ಅವರು ಯಾವಾಗ ಹೊರ ಬರುತ್ತಾರೋ, ತಮ್ಮ ಕನ್ಸಲ್ಟಿಂಗ್ ಕೋಣೆ ಸೇರುತ್ತಾರೋ ಎಂದು ಅತ್ಯಂತ ಆತುರ, ಒತ್ತಡ, ಗಾಬರಿಯ ಚಿತ್ತದಲ್ಲಿ ಕೈ ಕೈ ಹೊಸೆಯುತ್ತಾ, ವಿಲವಿಲನೆ ಒದ್ದಾಡುತ್ತಾ, ಕುಗ್ಗಿದ ಮನಸ್ಸಿಗೆ ಬದುಕಿನ ಭರವಸೆ ತುಂಬುತ್ತಾ ರಾಮಗೊಂಡ ಹೊರಗಿನ ವೇಟಿಂಗ್ ಕುರ್ಚಿಯಲ್ಲಿ ಕುಳಿತಿದ್ದ. ಅವನ ಮಗಳು ಸವಿತಾ ಈ ಹೈಟೆಕ್ ಆಸ್ಪತ್ರೆಯ ರೂಮ್ ನಂಬರ್ ಇಪ್ಪತ್ತೊಂದರ ಹಾಸಿಗೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದಳು. ಸರ್ವತೋ ಪರಿ ಮೆಡಿಕಲ್ ಟೆಸ್ಟ್‌ಗಳಾಗಿದ್ದವು. ಲಿವರ್ ಭಾಗದ ಫೈಬ್ರೋ ಸ್ಕ್ಯಾನ್ ಸಹ ಆಗಿತ್ತು. ಉದರದಲ್ಲಿ ನೀರು ತುಂಬಿತ್ತು. ಅದು ತೀವ್ರ ಭಯ ಹುಟ್ಟಿಸಿತ್ತು ಮತ್ತು ಉದರದ ಸೂಕ್ಷ್ಮಭಾಗಗಳ ಸ್ಕ್ಯಾನ್‌ಗಳು ಆಗಿದ್ದವು. ಎಲ್‌ಎಫ್‌ಟಿ ರಕ್ತ ತಪಾಸಣೆಯ, ಥರಾವರಿ ಮೆಡಿಕಲ್ ವರದಿಗಳ ಫೈಲು ತುಂಬಿ ಅದರ ಹೊಟ್ಟೆಯು ಉಬ್ಬಿತ್ತು. ಅದು ಅವರ ಟೇಬಲ್ ಮೇಲೆ ರೋಗಿಯಂತೆ ತಣ್ಣಗೆ ಮಲಗಿತ್ತು. ಆದರೆ ರಾಮಗೊಂಡನ ಮನವು ಎಂದೂ ಬೆದರದ ವಿಚಿತ್ರ ಭಯದಿಂದ ಚಡಪಡಿಸಿ ತಲ್ಲಣಗೊಂಡಿತ್ತು. ಡಾಕ್ಟರರು ಬಂದು ಏನು ಹೇಳುವರೋ? ಅದ್ಯಾವ ವೈರಾಣುವಿನ ರೋಗವೆಂದು ಜಾಹೀರು ಮಾಡುವರೋ? ಹೀಗೆಂದು ದಿಕ್ಕೇ ತೋಚದ ಮನೋಸ್ಥಿತಿ. ಈ ಮಾನಸಿಕ ಕ್ಷೋಭೆ ರಾಮಗೊಂಡನಲ್ಲಿ ತಲ್ಲಣ ಮೂಡಿಸಿತ್ತು. ಆ ಫಲಿತಾಂಶಗಳ ಹೊರಬೀಳುವ ಟೆನ್ಷನ್ ಹೈಪಾಗಿತ್ತು.

ಹೊರಗೆ ಕಾದ ಹೆಂಚಿನಂತಿರುವ ಸುಡೋ ಸುಡೋ ಬಿರು ಬಿಸಿಲು. ಇಂಥ ಬೇಸಿಗೆಯ ಧಗೆಯಲ್ಲಿ ಡೆಂಗ್ಯೂ, ಚಿಕುನ್‌ಗುನ್ಯಾ ಮತ್ತು ಹೆಪಟೈಟಿಸ್ ರೋಗಗಳ ಸುರಿಮಳೆಯೇ ಇತ್ತು. ಅವುಗಳ ಹಾವಳಿ ಘಾತುಕ ಮಟ್ಟದಲ್ಲಿತ್ತು. ಅದು ಅಕ್ಷರಶಃ ಸುತ್ತಲ ಭುವಿಯ ಮನುಷ್ಯರ ತಲೆಯ ಮೇಲೆ ರೌದ್ರ ನರ್ತನ ನಡೆಸಿತ್ತು. ಅದರಲ್ಲೂ ನಿರ್ದಿಷ್ಟ ವಯೋಮಾನದ ಮಕ್ಕಳು ಡೆಂಗ್ಯೂಗೆ ಬಲಿಯಾಗುತ್ತಿದ್ದರು. ಸರಕಾರದ ಆರೋಗ್ಯ ಮಂತ್ರಿಗಳು ಖರೆ ಅರ್ಥದಲ್ಲಿ ಡೆಂಗ್ಯೂ ನಿಯಂತ್ರಣ ಸಂದರ್ಭದಲ್ಲಿ ಜರೂರು ಕ್ರಮಗಳನ್ನು ತೆಗೆದುಕೊಂಡಿದ್ದರು. ಆದರೆ, ಹೆಪಟೈಟಿಸ್ ಮಾತ್ರ ಹತೋಟಿ ಮೀರಿತ್ತು. ಎಳೆ ಯಕೃತ್ತುಗಳ ಮೇಲೆ ಆಕ್ರಮಣಕಾರಿಯಾಗಿತ್ತು. ಕಬ್ಬಿನ ರಸವಂತಿ ಅಂಗಡಿಗಳಲ್ಲಿ, ಸಾವಯವ ಬೆಲ್ಲ, ಕಾಕವಿಗಳಿಗೆ ಎಲ್ಲಿಲ್ಲದ ಬೇಡಿಕೆ ಉಂಟಾಗಿತ್ತು. ಅದನ್ನು ಮೂಲೆಯಲ್ಲಿರುವ ದಿಲ್‌ರುಬಾ ರಸವಂತಿ ಕಬ್ಬು ರಸದ ಅಂಗಡಿಯ ರಸೂಲ ಮೋಮಿನ್, ರಾಮಗೊಂಡ ಕಬ್ಬಿನ ರಸ ತರಲು ಹೋದಾಗ ಹೇಳಿದ್ದ.

'ಜಾಯಿಂಡಿಸ್ ಆಜ್‌ಕಲ್ ಬಹುತ್ ಹೋ ಗಯಾ ಹೈ ಜೀ... ಬೆಂಗಲೋರ್ ಮೇ ತೋ ಉಸಕಾ ನಂಗಾ ನಾಚ್ ಚಲ್ ರಹಾ ಹೈ...! ಸಾಹೇಬರ... ದಿನಾ ಮುಂಜಾನಿ ಭಾಳ ಮಂದಿ ಕಬ್ಬಿನ ರಸಾ ಒಯ್ಯತಾರ... ಹಳಸಲ ಹೊಟ್ಟೀಲಿ ಕುಡ್ಯಾಕ! ದವಾಖಾನಿ ಮತ್ತ ಗಾಂವಟಿ ಔಷಧ ಕೊಡಾವರ ಬಾಗಿಲದಾಗ ಮಂದೀದು ಹಂಗ ರಾಂಕ ಹತ್ತೇತ್ರಿ ನೋಡಿರಿ...' ಅಂತ ಹೇಳಿದ್ದ ಮಾತುಗಳನ್ನು ರಾಮಗೊಂಡ ಕೇಳಿಸಿ ಕೊಂಡಿದ್ದ. ತನಗೆ ತಾನೇ ಸಾಂತ್ವನ ತಂದುಕೊಂಡಿದ್ದ. ಆತನಿಗೆ ಆ ಮಾತು ಕ್ಷಣ ಹೊತ್ತು ಸಂಜೀವಿನ ತರಹ ಭಾಸವಾಯಿತು.

ಆಸ್ಪತ್ರೆಯ ಆ ರೂಮಿನಲ್ಲಿ ಮಗಳು ಸವಿತಾ ಅಂಜದೆ, ಅಳುಕದೆ ಇದ್ದಳು. ರಾಮಗೊಂಡ ಮತ್ತು ಮಡದಿ ಸುನೀತಾಳಿಗೆ ಕೊಂಚ ನೆಮ್ಮದಿ ತಂದಿತ್ತು. ಹುಡುಗಿ ವಜ್ರದೇಹಿ. ಗಟ್ಟಿ ಮನವುಳ್ಳವಳು. ಹಾಗೆ ರಾಮಗೊಂಡನೇ ಮಕ್ಕಳ ವಿಷಯದಲ್ಲಿ ಬೆಚ್ಚುವ ಬೆದರು ಬೊಂಬೆ! ಅವನ ಎದೆ ಒಡೆದು ಚೂರಾಗಿತ್ತು. 'ನನ್ನ ಕಂದವ್ವಗ ಅದ್ಯಾನಾತೋ ದ್ಯಾವರ' ಅಂತ ಆತನ ಮನಸ್ಸು ಒಂದೇ ಸವನೇ ಯಾತನೆ ಪಟ್ಟು ಹಲುಬುತ್ತಿತ್ತು. ತಾನು ಶೀಘ್ರ ಆರೈಕೆ ಮಾಡುವಲ್ಲಿ ಎಲ್ಲಾದರು ತಪ್ಪಿದೆನೆ? ವಿಫಲನಾದೆನೆ? ಎಂದು ಒಮ್ಮೊಮ್ಮೆ ಅಪರಾಧಿ ಭಾವನೆ ಕಾಡುತ್ತಿತ್ತು. ಹುಚ್ಚರಂತೆ ಪರಿತಪಿಸುತ್ತಿದ್ದ. ಮರುಕ್ಷಣ ತನಗೆ ತಾನು ಸಾಂತ್ವನ ತಂದುಕೊಳ್ಳುತ್ತಿದ್ದ. ಒಡೆದ ಕನ್ನಡಿಯಂತೆ ಅವನ ಹೃದಯವು ಛಿನ್ನ ವಿಛಿನ್ನವಾದ ಗಾಜಿನ ತುಣುಕುಗಳಾಗಿದ್ದವು. ಯಾವುದೇ ಕೆಲಸ ಕಾರ್ಯಗಳಲ್ಲಿ ಜೀವ ರಮಿಸುತ್ತಿರಲಿಲ್ಲ. ಹಸಿವು ನೀರಡಿಕೆ ಹಾರಿತ್ತು. ಸವಿತಾಳ ತಾಯಿ ಸುನೀತಾ